# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಯಶೋಧಮ್ಮ, ಅಧ್ಯಕ್ಷರು, ಯಲಿಯೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 48(4) ಮತ್ತು 48(5) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ:ಬೆಂಗ್ರಾಜಿಪಂ/ಪ.ಶಾ./ಸಿ.ಆರ್-14/2017-18 ದಿನಾಂಕ:31-07-2017.
2. ಸರ್ಕಾರದ ಇದೇ ಸಮಸಂಖ್ಯೆಯ ಪತ್ರ ದಿನಾಂಕ:23-08-2017 ಮತ್ತು 04-01-2018.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ:ಬೆಂಗ್ರಾಜಿಪಂ/ಪ.ಶಾ./ಸಿ.ಆರ್-14/2017-18 ದಿನಾಂಕ:09-03-2018.
4. ಸರ್ಕಾರದ ಇದೇ ಸಮಸಂಖ್ಯೆಯ ದಿನಾಂಕ:26-06-2018 ರ ಕಾರಣ ಕೇಳುವ ನೋಟೀಸ್.
5. ಶ್ರೀಮತಿ ಯಶೋಧಮ್ಮ, ಅಧ್ಯಕ್ಷರು, ಯಲಿಯೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:05-07-2018.
6. ವಿಚಾರಣಾ ತಿಳುವಳಿಕೆ ಪತ್ರ ದಿನಾಂಕ:22-09-2018 ಮತ್ತು 28-09-2019,

**ಪ್ರಸ್ತಾವನೆ :**

ಶ್ರೀಮತಿ ಯಶೋಧಮ್ಮ, ಅಧ್ಯಕ್ಷರು, ಯಲಿಯೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ 13ನೇ ಹಣಕಾಸು ಯೋಜನೆಯಡಿ ಮೀಸಲಿಟ್ಟ ಶೇ.25% ಮತ್ತು ಶೇ.3% ಅನುದಾನವನ್ನು ಸಂಬಂಧಿಸಿದ ಕಲ್ಯಾಣ ಕಾರ್ಯಕ್ರಮಗಳಿಗೆ ಖರ್ಚು ಮಾಡದಿರುವುದು, ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಾಮಗಾರಿಗಳನ್ನು ಅಳವಡಿಸದೇ ಬಿಲ್ ಪಾವತಿಸದಿರುವುದು, ತಾಲ್ಲೂಕು ಪಂಚಾಯತಿಯ ಆದೇಶದ ಹೊರತಾಗಿಯೂ ಹೊಸದಾಗಿ ರಚನೆಯಾದ ಮಂಡಿಬೆಲೆ ಗ್ರಾ.ಪಂ.ಗೆ ಸಂಬಂಧಿಸಿದ ದಾಖಲೆಗಳು, ವಹಿಗಳು, ಅನುದಾನವನ್ನು ವರ್ಗಾಯಿಸದೇ ಇದೇ ಗ್ರಾಮ ಪಂಚಾಯತಿಯಿಂದ ಕಾಮಗಾರಿ ನಿರ್ವಹಿಸಿ ಹಣ ಪಾವತಿಸಿರುವುದು, ಕ್ರಿಯಾ ಯೋಜನೆಯ ಕಾಮಗಾರಿಯ ಅಂದಾಜು ಮೊತ್ತವನ್ನು ಬಿಳಿಶಾಹಿಯಿಂದ ತಿದ್ದಿರುವುದು, ಕುಡಿಯುವ ನೀರಿನ ಮೋಟರ್ ಮತ್ತು ಪಂಪು ದುರುಸ್ಥಿಗಾಗಿ ಮಾಡಿರುವ ಖರ್ಚುಗಳಲ್ಲಿ ನಿಯಮ ಪಾಲಿಸದೇ ಕೆ.ಟಿ.ಪಿ.ಪಿ ಕಾಯ್ದೆಯಡಿ ಆಗಿರುವ ಅವ್ಯವಹಾರಗಳ ಹಣ ದುರುಪಯೋಗಪಡಿಸಿಕೊಂಡಿರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪ್ರಸ್ತಾವನೆಯಲ್ಲಿ ಶ್ರೀಮತಿ ಯಶೋಧಮ್ಮ, ಅಧ್ಯಕ್ಷರು, ಯಲಿಯೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ತಿಳುವಳಿಕೆ ಪತ್ರ ಜಾರಿ ಮಾಡಿರುವುದಾಗಿ ವರದಿ ಸಲ್ಲಿಸಿದ್ದು, ಸದರಿ ವರದಿಯನ್ನು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಅವ್ಯವಹಾರ ಕಂಡುಬಂದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರದ ಪತ್ರಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಗೆ ತಿಳಿಸಲಾಗಿತ್ತು. ಈ ಸಂಬಂಧ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರ ಹಾಗೂ ಅದರೊಂದಿಗೆ ಲಗತ್ತಿಸಿರುವ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ದೇವನಹಳ್ಳಿ, ರವರ ವರದಿಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀಮತಿ ಯಶೋಧಮ್ಮ, ಅಧ್ಯಕ್ಷರು, ಯಲಿಯೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ಆರೋಪವು ಸಾಬೀತಾಗಿರುವುದಾಗಿ ವರದಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43-ಎ ಮತ್ತು 48(4) ರಡಿಯಲ್ಲಿ ದಾಖಲಿಸಿಕೊಳ್ಳಲಾಯಿತು ಮತ್ತು ಆರೋಪಿತ ಅಧ್ಯಕ್ಷರಿಗೆ ಸದರಿ ಪ್ರಕರಣದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಲಗತ್ತಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (4) ರಂತೆ ದಿನಾಂಕ: 26.06.2018 ರಂದು ಕಾರಣ ಕೇಳುವ ನೋಟೀಸನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಯಲಹಂಕ ರವರ ಮುಖಾಂತರ ಜಾರಿಗೊಳಿಸಿ, 15 ದಿನಗಳ ಒಳಗಾಗಿ ಸಮಜಾಯಿಷಿಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಆರೋಪಿತ ಅಧ್ಯಕ್ಷರು ಮೇಲೆ ಓದಲಾದ ಕ್ರಮ ಸಂಖ್ಯೆ (5) ರಂತೆ ದಿನಾಂಕ: 05.07.2018 ರಂದು ಸರ್ಕಾರಕ್ಕೆ ಸಲ್ಲಿಸಿರುವ ಸಮಜಾಯಿಷಿನ್ನು ಪರಿಶೀಲಿಸಲಾಯಿತು ಹಾಗೂ ಸದರಿ ಪ್ರಕರಣದ ವಿಚಾರಣೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅರೆನ್ಯಾಯಿಕ ನ್ಯಾಯಾಲಯದಲ್ಲಿ ನಡೆಸಲು ತೀರ್ಮಾನಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (6) ರಂತೆ ವಿಚಾರಣಾ ಹಾಜರಾತಿ ತಿಳುವಳಿಕೆ ದಿನಾಂಕ: 22.09.2018 ಮತ್ತು 29.08.2019 ಗಳಂದು ವಿಚಾರಣಾ ವಿಚಾರಣಾ ತಿಳುವಳಿಕೆ ಪತ್ರವನ್ನು ಜಾರಿಗೊಳಿಸಲಾಯಿತು ಹಾಗೂ ದಿನಾಂಕ: 29.09.2018 ಮತ್ತು ದಿನಾಂಕ: 03.09.2019 ರಂದು ವಿಚಾರಣೆಗೆ ತೆಗೆದುಕೊಂಡು ವಿಚಾರಣೆ ನಡೆಸಲಾಗಿರುತ್ತದೆ.

ದಿನಾಂಕ:29.09.2018 ರಂದು ನಡೆದ ವಿಚಾರಣೆಯಲ್ಲಿ ಆರೋಪಿತ ಅಧ್ಯಕ್ಷರಾದ ಶ್ರೀಮತಿ ಯಶೋಧಮ್ಮ ರವರ ಹೇಳಿಕೆ ಮತ್ತು ಯಲಿಯೂರು ಗ್ರಾಮ ಪಂಚಾಯತಿಯ ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ(ಪ್ರಕರಣ ನಡೆದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರು), ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತಿ, ಮತ್ತು ಸಹಾಯಕ ಕಾರ್ಯದರ್ಶಿ ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರುಗಳ ಹೇಳಿಕೆಗಳನ್ನು ಪಡೆಯಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು. ವಿಚಾರಣಾ ಸಮಯದಲ್ಲಿ ಜಿಲ್ಲಾ ಪಂಚಾಯತಿಯ ಅಧಿಕಾರಿಯವರು ಪ್ರಕರಣ ನಡೆದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆಯು ಜಿಲ್ಲಾ ಪಂಚಾಯತಿಯಲ್ಲಿ ನಡೆಸುತ್ತಿರುವುದಾಗಿ ತಿಳಿಸಿರುತ್ತಾರೆ. ಸದರಿ ವಿಚಾರಣೆಯನ್ನು 20 ದಿನಗಳ ಒಳಗಾಗಿ ಮುಕ್ತಾಯಗೊಳಿಸಿ ನ್ಯಾಯಾಲಯಕ್ಕೆ ಆದೇಶವನ್ನು ಸಲ್ಲಿಸುವಂತೆ ತಿಳಿಸಲಾಯಿತು.

ದಿನಾಂಕ: 03.09.2019 ರಂದು ನಡೆಸಲಾದ ವಿಚಾರಣೆಯಲ್ಲಿ ಆರೋಪಿತ ಅಧ್ಯಕ್ಷರು ಹಾಗೂ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ, ದೇವನಹಳ್ಳಿ ತಾಲ್ಲೂಕು ರವರುಗಳು ಹಾಜರಾಗಿರುತ್ತಾರೆ. ಅಧ್ಯಕ್ಷರ ಹೇಳಿಕೆಯನ್ನು ಕೇಳಲಾಗಿ, ಆರೋಪಿತ ಅಧ್ಯಕ್ಷರು ಈಗಾಗಲೇ ತಮ್ಮ ಹೇಳಿಕೆಯನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಪ್ರಕರಣ ನಡೆದ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರ ವಿರುದ್ಧದ ಇಲಾಖಾ ವಿಚಾರಣೆಯು ನಡೆಯುತ್ತಿರುವುದಾಗಿ ತಿಳಿಸಿದರು.

ಶ್ರೀಮತಿ ಯಶೋಧಮ್ಮ, ಅಧ್ಯಕ್ಷರು, ಯಲಿಯೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧದ ಆರೋಪಗಳು ಈ ಕೆಳಕಂಡಂತಿರುತ್ತವೆ.

**ಆರೋಪ-1:** 2015-16ನೇ ಸಾಲಿನಲ್ಲಿ 13 ನೇ ಹಣಕಾಸು ಯೋಜನೆಯಡಿ ಅನುದಾನ ರೂ.15,68,142/-ಗಳು ಲಭ್ಯವಿದ್ದು, ಸದರಿ ಅನುದಾನದಲ್ಲಿ ಶೇ.25% ರ ಪರಿಶಿಷ್ಟ ಜಾತಿ ಹಾಗೂ ಪ.ಪಂಗಡಗಳ ಮೊತ್ತ ಹಾಗೂ ಶೇ 3% ರ ವಿಕಲಚೇತನರಿಗೆ ಮೀಸಲಿರಿಸಿದ ಅನುದಾನವನ್ನು ಬಳಕೆ ಮಾಡಿರುವುದಿಲ್ಲ.

ಆರೋಪಿತ ಅಧ್ಯಕ್ಷರು ತಮ್ಮ ಸಮಜಾಯಿಷಿಯಲ್ಲಿ ಅನುದಾನ ಕಡಿಮೆ ಲಭ್ಯವಿದ್ದ ಕಾರಣ ಫಲಾನುಭವಿಗಳನ್ನು ನಿಗಧಿತ ಅವಧಿಯಲ್ಲಿ ವಿತರಿಸಲು ಅವಕಾಶವಾಗದಿದ್ದ ಪ್ರಯುಕ್ತ ಅನುಧಾನವನ್ನು ಫಲಾನುಭವಿಗಳಿಗೆ ವೆಚ್ಚ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

2015-16ನೇ ಸಾಲಿನಲ್ಲಿ 13 ನೇ ಹಣಕಾಸು ಯೋಜನೆಯಡಿ ಅನುದಾನ ರೂ.15,68,142/-ಗಳು ಲಭ್ಯವಿದ್ದು, ಸದರಿ ಅನುದಾನದಲ್ಲಿ ಶೇ.25% ರ ಪರಿಶಿಷ್ಟ ಜಾತಿ ಹಾಗೂ ಪ.ಪಂಗಡಗಳ ಮೊತ್ತ ಹಾಗೂ ಶೇ 3% ರ ವಿಕಲಚೇತನರಿಗೆ ಮೀಸಲಿರಿಸಿದ ಅನುದಾನದಲ್ಲಿ ಫಲಾನುಭವಿಗಳನ್ನು ಆದ್ಯತೆ ಮೇರೆಗೆ ಪರಿಗಣಿಸಿ, ಆಯ್ಕೆ ಮಾಡಿ ಆಯಾ ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಿದ್ದ ಹಣವನ್ನು ಅದೇ ಸಾಲಿನಲ್ಲಿ ವೆಚ್ಚ ಮಾಡಬೇಕಾಗಿರುವುದು ಸಂಬಂಧಿಸಿದ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ. ಆದರೆ ಆರೋಪಿತ ಅಧ್ಯಕ್ಷರು 13 ನೇ ಹಣಕಾಸು ಯೋಜನೆಯ

ಅನುದಾನದ ಹಣವನ್ನು ಅರ್ಹ ಫಲಾನುಭವಿಗಳಿಗೆ ಬಳಕೆ ಮಾಡದಿರುವುದು ಅವರ ಸಮಜಾಯಿಷಿಯಿಂದಲೂ ತಿಳಿದುಬರುತ್ತದೆ. ಆದ್ದರಿಂದ ಮೇಲಿನ ಆರೋಪವು ಸಾಬೀತಾಗಿರುತ್ತದೆ.

**ಆರೋಪ-2:** 2016-17ನೇ ಸಾಲಿನ 13 ನೇ ಹಣಕಾಸು ಕ್ರಿಯಾ ಯೋಜನೆಯಲ್ಲಿ ಒಟ್ಟು 15 ಕಾಮಗಾರಿಗಳ ಪೈಕಿ 10 ಸಿವಿಲ್ ಕಾಮಗಾರಿಗಳಾಗಿದ್ದು, ಉಳಿಕೆ ಸಂಖ್ಯೆಗಳು ಇತರೆ ವಿಷಯಗಳಾಗಿರುತ್ತವೆ. ಅನುಷ್ಠಾನಗೊಳಿಸಿರುವ ಒಟ್ಟು 10 ಕಾಮಗಾರಿಗಳಲ್ಲಿ 05 ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕದಲ್ಲಿ ಅಳವಡಿಸಿದ್ದು ಉಳಿಕೆ 05 ನ್ನು ಅಳವಡಿಸಿದೆ ನಿಯಮಬಾಹಿರವಾಗಿ ಬಿಲ್ ಪಾವತಿ ಮಾಡಿರುತ್ತಾರೆ.

ಈ ಆರೋಪಕ್ಕೆ ಸಂಬಂಧಿಸಿದಂತೆ ಆರೋಪಿತ ಅಧ್ಯಕ್ಷರು ತಾಂತ್ರಿಕ ದೋಷದಿಂದ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಲು ಸಾಧ್ಯವಾಗಿಲ್ಲ ಹಾಗೂ ನಂತರ ಸಮಯದಲ್ಲಿ ಪ್ರಯತ್ನಿಸಿದಾಗಿ ಲಾಕ್ ಮಾಡಿದ್ದರಿಂದ ಸೇರ್ಪಡಿಸಲಾಗಲಿಲ್ಲವೆಂದು ತಿಳಿಸಿರುತ್ತಾರೆ.

ಆದರೆ 5 ಸಿವಿಲ್ ಕಾಮಗಾರಿಗಳನ್ನು ಹೊರತುಪಡಿಸಿ, ಉಳಿಕೆ 10 ಕಾಮಗಾರಿಗಳಲ್ಲಿ 5 ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕದಲ್ಲಿ ಅಳವಡಿಸಿದ್ದು, ಉಳಿದ 5 ಕಾಮಗಾರಿಗಳನ್ನು ಉದ್ದೇಶಪೂರ್ವಕವಾಗಿ ಗಾಂಧಿ ಸಾಕ್ಷಿ ಕಾಯಕದಲ್ಲಿ ಅಳವಡಿಸದೇ ಇರುವುದು ಕಂಡುಬಂದಿರುತ್ತದೆ ಇದರಿಂದ ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ/03/ಗ.ಕೋಶ/2013ರ ದಿನಾಂಕ: 02.10.2013 ರ ಆದೇಶವನ್ನು ಉಲ್ಲಂಘಿಸಿ ಬಿಲ್ ಪಾವತಿಸಿರುವುದು ಕಂಡುಬಂದಿರುವುದರಿಂದ ಆರೋಪಿತ ಅಧ್ಯಕ್ಷರ ಹೇಳಿಕೆಯನ್ನು ಒಪ್ಪಲು ಸಾಧ್ಯವಿರುವುದಿಲ್ಲ ಆದ್ದರಿಂದ ಈ ಆರೋಪವು ಸಾಬೀತಾಗಿದೆ ಎಂದು ನಿರ್ಣಯಿಸಿದೆ.

**ಆರೋಪ-3:** ಮಂಡಿಬೆಲೆ ಗ್ರಾ.ಪಂ.ಗೆ ಸಂಬಂಧಿಸಿದ ದಾಖಲೆಗಳು, ವಹಿಗಳು, ಅನುದಾನವನ್ನು ವರ್ಗಾಯಿಸದೇ ಇದೇ ಗ್ರಾಮ ಪಂಚಾಯತಿಯಿಂದ ಕಾಮಗಾರಿ ನಿರ್ವಹಿಸಿ ಹಣ ಪಾವತಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಆರೋಪಿತ ಅಧ್ಯಕ್ಷರು ತಮ್ಮ ಹೇಳಿಕೆಯಲ್ಲಿ ತಾಲ್ಲೂಕು ಪಂಚಾಯತಿಯ ಆದೇಶದ ಹೊರತಾಗಿಯೂ ಹೊಸದಾಗಿ ರಚನೆಯಾದ ಮಂಡಿಬೆಲೆ ಗ್ರಾ.ಪಂ.ಗೆ ಸಂಬಂಧಿಸಿದ ದಾಖಲೆಗಳು, ವಹಿಗಳು, ಅನುಧಾನವನ್ನು ಪಾವತಿಸದೇ ಇದೇ ಗ್ರಾಮ ಪಂಚಾಯತಿಯಿಂದ ಕಾಮಗಾರಿ ನಿರ್ವಹಿಸಿರುವ 3 ಕಾಮಗಾರಿಗಳ ಬಿಲ್ ಮೊತ್ತ ಒಟ್ಟು ರೂ.2,67,197/-ಗಳ ಹಣ ಪಾವತಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಆರೋಪಿತ ಸದಸ್ಯರು ಮಂಡಿಬೆಲೆ ಗ್ರಾಮ ಪಂಚಾಯತಿ ರಚನೆಯಾಗುವ ಮೊದಲೇ ಹಳಿಯೂರು ಗ್ರಾಮ ಪಂಚಾಯತಿಗೆ ಸೇರಿದ್ದು, ಅಭಿವೃದ್ಧಿ ದೃಷ್ಟಿಯಿಂದ ದಿನಾಂಕ: 04.12.2016 ರಲ್ಲಿಯೇ 3 ಕಾಮಗಾರಿಗಳನ್ನು ನಿರ್ವಹಿಸಿದ್ದರಿಂದ ರೂ.2,67,197/-ಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಆದರೆ ತಾಲ್ಲೂಕು ಪಂಚಾಯತಿ ಕಛೇರಿ ಜ್ಞಾಪನಾ ಪತ್ರದ ಸಂಖ್ಯೆ:ಕಾನಿಅ/ ತಾಪಂದೇ/ಉಖಾಯೂ/2015-16 ದಿನಾಂಕ: 13-07-2015 ರಂತೆ ಹೊಸದಾಗಿ ರಚನೆಯಾಗಿರುವ ಗ್ರಾಮ ಪಂಚಾಯತಿಗೆ ಸಂಬಂಧಪಟ್ಟ ಗ್ರಾಮದ ಡಿಮ್ಯಾಂಡ್ ವಹಿ, ಮ್ಯುಟೇಶನ್ ವಹಿ, ರಸೀದಿ ಪುಸ್ತಕಗಳು, ತೆರಿಗೆ ಮೊತ್ತ, ಸರ್ಕಾರದಿಂದ ಬಿಡುಗಡೆಯಾದ ಯೋಜನಾವಾರು ಮೊತ್ತದಲ್ಲಿ ಸದರಿ ಗ್ರಾಮಕ್ಕೆ ನಿಗಧಿಪಡಿಸಿರುವ ಅನುಧಾನ ಹಾಗೂ ಕ್ರಿಯಾ ಯೋಜನೆ ಪಟ್ಟಿ ಇತರೆ ದಾಸ್ತಾನು ವಹಿಗಳನ್ನು ವರ್ಗಾಯಿಸುವಂತೆ ಸೂಚಿಸಿದ್ದರೂ, ಆಪಾದಿತ ಹಳಿಯೂರು ಗ್ರಾಮದ 3 ಕಾಮಗಾರಿಗೆ ದಿನಾಂಕ:28-03-2016 ರಂದು ನಿಯಮಬಾಹಿರವಾಗಿ ಬಿಲ್ ಪಾವತಿಸಿರುವುದು ದಾಖಲೆಗಳಿಂದ ಸ್ಪಷ್ಟವಾಗಿರುತ್ತದೆ. ಆದ್ದರಿಂದ ಈ ಆರೋಪವು ಸಾಬೀತಾಗಿರುತ್ತದೆ.

**ಆರೋಪ-4:** 13 ನೇ ಹಣಕಾಸು ಆಯೋಗದ ಅನುದಾನದ ಕ್ರಿಯಾ ಯೋಜನೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ಸ್ಥಳೀಯ ಕೂಲಿ ಕಾರ್ಮಿಕರ ಹೆಸರಿನಲ್ಲಿ ಎನ್.ಎಂ.ಆರ್.ದಾಖಲೆ ಮಾಡಿ ರೂ.82000/- ಗಳನ್ನು ಕೂಲಿ ಕಾರ್ಮಿಕರಿಗೆ ಪಾವತಿಸಲಾಗಿರುತ್ತದೆ. ಸದರಿ ಆರೋಪಕ್ಕೆ ಸಂಬಂಧಿಸಿದಂತೆ ಆರೋಪಿತ ಅಧ್ಯಕ್ಷರು ತಮ್ಮ ಸಮಜಾಯಿಷಿಯಲ್ಲಿ ನಿಗಧಿತ ಸಮಯದಲ್ಲಿ ಗುತ್ತಿಗೆದಾರರು ದೊರಕದಿರುವುದರಿಂದ ಸ್ಥಳೀಯ ಕಾರ್ಮಿಕರು ಕೆಲಸವನ್ನು ನಿರ್ವಹಿಸಿರುತ್ತಾರೆ. ಆದ್ದರಿಂದ ಕೆಲಸಕ್ಕನುಸಾರವಾಗಿ ವೆಚ್ಚದ ರೀತಿ ಎನ್.ಎಂ.ಆರ್.ಗಳನ್ನು ತಯಾರಿಸಿ ಕೂಲಿ ಕಾರ್ಮಿಕರಿಗೆ ಹಣ ಪಾವತಿಸಲಾಗಿದೆ ಎಂದು ತಮ್ಮ ಸಮಜಾಯಿಷಿಯಲ್ಲಿ ತಿಳಿಸಿರುತ್ತಾರೆ.

ಆದರೆ ಕಾಮಗಾರಿಯ ನಿರ್ವಹಣೆಗೆ ಗುತ್ತಿಗೆದಾರರು ದೊರಕದಿದ್ದ ಸಂದರ್ಭದಲ್ಲಿ ತುಂಡು ಗುತ್ತಿಗೆ ಕರಾರು ಮುಖಾಂತರ ಕಾರ್ಯಾದೇಶ ನೀಡಿ ಅಳತೆ ಪುಸ್ತಕದಲ್ಲಿ ನಮೂದಿಸಿ ನಿಯಮಾನುಸಾರ ಬಿಲ್ ಮುಖಾಂತರ ಹಣ ಪಾವತಿಸಬೇಕಾಗಿರುತ್ತದೆ. ಸದರಿ ಪ್ರಕರಣದಲ್ಲಿ ಗುತ್ತಿಗೆದಾರರ ಜೊತೆ ತುಂಡುಗುತ್ತಿಗೆ ಕರಾರು ಒಪ್ಪಂದ ಮಾಡಿಕೊಂಡಿದ್ದರೂ ಸಹ ತುಂಡುಗುತ್ತಿಗೆದಾರರಿಗೆ ಪಾವತಿಸದೇ ನೇರವಾಗಿ ಕೂಲಿ ಕಾರ್ಮಿಕರಿಗೆ ಹಣ ಪಾವತಿಸುವುದು ನಿಯಮಬಾಹಿರವಾಗಿರುತ್ತದೆ. ಆದ್ದರಿಂದ ಸದರಿ ಆರೋಪವು ಸಾಬೀತಾಗಿರುತ್ತದೆ.

**ಆರೋಪ-5:** ಕುಡಿಯುವ ನೀರಿನ ಮೋಟಾರ್ ಪಂಪು ದುರಸ್ಥಿಗಾಗಿ ಮಾಡಿರುವ ಖರ್ಚುಗಳಲ್ಲಿ ನಿಯಮ ಪಾವತಿಸದೇ ಇರುವ ಆರೋಪದಲ್ಲಿ 2015-16ನೇ ಸಾಲಿನಲ್ಲಿ ಪಂಪು ಮೋಟಾರ್ ದುರಸ್ಥಿ ವೆಚ್ಚಕ್ಕೆಂದು ದಿನಾಂಕ: 24.03.2016 ರಂದು ಚೆಕ್ ಸಂಖ್ಯೆ: 484632 ರಿಂದ 483635 ರವರೆಗೆ ಒಟ್ಟು ರೂ.3,60,440/-ಗಳಿಗೆ ದರಪಟ್ಟಿಯನ್ನು ಪಡೆದು ತುಲನಾತ್ಮಕ ಪಟ್ಟಿಗೆ ಕಡಿಮೆ ದರ ನಮೂದಿಸಿದವರಿಗೆ ನಿಯಮಾನುಸಾರ ಪಾವತಿಸಿರುತ್ತಾರೆ.

ಆದರೆ ವಾರ್ಷಿಕ ರೂ. 1,00,000/-ಕ್ಕೆ ಮೀರಿದ ಯಾವುದೇ ದುರಸ್ಥಿ ನಿರ್ವಹಣೆ ಕಾಮಗಾರಿಗಳ ಬಿಲ್ ಪಾವತಿಗೆ ಸಂಬಂಧಪಟ್ಟಂತೆ ಕೆ.ಟಿ.ಪಿ.ಪಿ ಕಾಯ್ದೆ ಹಾಗೂ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಮೂಲಕ ಹಣ ಪಾವತಿ ಮಾಡಬೇಕಾಗಿರುತ್ತದೆ. ಸದರಿ ಆರೋಪಕ್ಕೆ ಸಂಬಂಧಪಟ್ಟಂತೆ ಆರೋಪಿತ ಅಧ್ಯಕ್ಷರು ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ನಿಯಮಾನುಸಾರ ಬಿಲ್ ಪಾವತಿಸದಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಸದರಿ ಆರೋಪವು ಸಾಬೀತಾಗಿರುತ್ತದೆ.

**ಆರೋಪ-6:** 13ನೇ ಹಣಕಾಸು ಆಯೋಗದ ಅನುದಾನದ ಕ್ರಿಯಾಯೋಜನೆಗೆ ನಿಗಧಿಪಡಿಸಿದ ಅಂದಾಜು ಮೊತ್ತವನ್ನು ಬಿಳಿಶಾಹಿಯಿಂದ ತಿದ್ದಿರುವ ಆರೋಪಕ್ಕೆ ಸಂಬಂಧಿಸಿದಂತೆ ಆರೋಪಿತ ಅಧ್ಯಕ್ಷರು ಸಭಾ ನಡವಳಿಯನ್ನು ಬರೆಯುವ ಸಂದರ್ಭದಲ್ಲಿ ಕೈತಪ್ಪಿನಿಂದ ದಿನಾಂಕವನ್ನು ದಾಖಲಿಸಿದ್ದರ ಅನ್ವಯ ಪರಿಶೀಲಿಸಿ, ಸಭೆ ನಡೆದ ದಿನಾಂಕವನ್ನು ದಾಖಲಿಸಲಾಗಿದೆಯೇ ಹೊರತು ಯಾವುದೇ ದುರುದ್ದೇಶದಿಂದ ತಿದ್ದುಪಡಿ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸಭಾ ನಡವಳಿಯನ್ನು ಬರೆಯುವ ಅಧಿಕಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಅಧ್ಯಕ್ಷರದ್ದಾಗಿರುವುದರಿಂದ ಈ ಆರೋಪಕ್ಕೆ ಸಂಬಂಧಿಸಿದಂತೆ ಆರೋಪಿತ ಅಧ್ಯಕ್ಷರು ಸಭಾ ನಡವಳಿಯನ್ನು ಬರೆಯುವ ಸಂದರ್ಭದಲ್ಲಿ ಕೈತಪ್ಪಿನಿಂದ ದಿನಾಂಕವನ್ನು ದಾಖಲಿಸಿದ್ದಾಗಿ ತಿಳಿಸಿ ನೀಡಿರುವ ಸಮಜಾಯಿಷಿಯನ್ನು ಒಪ್ಪಲಾಗಿದೆ ಹಾಗೂ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ ತಿದ್ದುಪಡಿಗೆ ದೃಢೀಕರಿಸಿರುವುದರಿಂದ ಈ ಆರೋಪವನ್ನು ಕೈಬಿಡಬಹುದಾಗಿದೆ.

ಮೇಲ್ಕಂಡ 6 ಆರೋಪಗಳಲ್ಲಿ 5 ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4) ರಲ್ಲಿ ತಿಳಿಸಿರುವಂತೆ ಗ್ರಾಮ ಪಂಚಾಯತಿಯ ಅಧ್ಯಕ್ಷನು ಅಥವಾ ಉಪಾಧ್ಯಕ್ಷನು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಅಲಕ್ಷತೆ ಮತ್ತು ದುರ್ನಡತೆಯಿಂದ ತಪ್ಪಿತಸ್ಥನಾಗಿದ್ದಲ್ಲಿ ಅವನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ (ಮತ್ತು ಅವಶ್ಯಕವಾದಲ್ಲಿ ತಾಲ್ಲೂಕು ಪಂಚಾಯತಿಯಿಂದ ವರದಿಯನ್ನು ಪಡೆದುಕೊಂಡು ಅದನ್ನು ಪರಿಶೀಲಿಸಿದ ತರುವಾಯ) ಸರ್ಕಾರವು ಆ ಹುದ್ದೆಯಿಂದ ತೆಗೆದುಹಾಕಬಹುದು ಎಂದು ಉಲ್ಲೇಖಿಸಲಾಗಿದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4) ಮತ್ತು 48(5)ರನ್ವಯ ಶ್ರೀಮತಿ ಯಶೋಧಮ್ಮ, ಅಧ್ಯಕ್ಷರು ಯಲಿಯೂರು ಗ್ರಾಮ ಪಂಚಾಯಿತಿ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಯಲಿಯೂರು ಗ್ರಾಮ ಪಂಚಾಯಿತಿಯ, ಅಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/409/ಗ್ರಾಪಂಅ/2017**
**ಬೆಂಗಳೂರು, ದಿನಾಂಕ:13-02-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಯಲಿಯೂರು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಯಶೋಧಮ್ಮ ರವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 48(5) ರನ್ವಯ ಯಲಿಯೂರು ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವದಿಂದ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 13/02/2020.
(ಬಿ. ನವೀನ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
13/2/20

**ಗೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
2) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
3) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯಲಿಯೂರು ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
4) ಸಂಬಂಧಿಸಿದವರಿಗೆ (ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಮುಖಾಂತರ)
5) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.
6) ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿ: ಮಾಹಿತಿಗಾಗಿ**

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.